# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 673 |
| ಉತ್ತರಿಸಬೇಕಾದ ದಿನಾಂಕ | 22.02.2022 |
| ಉತ್ತರಿಸಬೇಕಾದ ಸಚಿವರು | ನಗರಾಭಿವೃದ್ಧಿಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ವಿಜಯಪುರ ಜಿಲ್ಲೆಯ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತ್ ನಲ್ಲಿ ಎಷ್ಟು ಎಸ್.ಟಿ.ಪಿ ಪ್ಲಾಂಟ್ ಗಳನ್ನು ಅಳವಡಿಸಲಾಗಿದೆ; | ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಇವುಗಳ ಸಾಮರ್ಥ್ಯ ಎಷ್ಟು; ಇನ್ನೂ ಎಷ್ಟು ನಗರಸಭೆ ಪುರಸಭೆಗಳಿಗೆ ಅಳವಡಿಸುವ ಯೋಜನೆಗಳಿವೆ? (ವಿವರ ನೀಡುವುದು) | |

ಸಂಖ್ಯೆ: ನಅಇ 29 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

## ಅನುಬಂಧ

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ವಿಜಯಪುರ ಜಿಲ್ಲೆಯ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳಲ್ಲಿ ಎಸ್.ಟಿ.ಪಿ. ಗಳನ್ನು ಅಳವಡಿಸಲಾದ /ಅಳವಡಿಲಾಗುತ್ತಿರುವ ವಿವರಗಳು**

**(ಎಲ್.ಎ.ಕ್ಯೂ ಸಂಖ್ಯೆ 592 (673))**

| ಕ್ರ. ಸಂ. | ಪಟ್ಟಣದ ಹೆಸರು | ಎಸ್.ಟಿ.ಪಿ ಸಾಮರ್ಥ್ಯ | ಷರಾ |
|---|---|---|---|
| 1 | ಬಸವನ ಬಾಗೇವಾಡಿ (ಪುರಸಭೆ) | 4.02 ದಶಲಕ್ಷ ಲೀಟರ್ | ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ/13/ ಸಿಎಸ್ಎಸ್/2006, ಬೆಂಗಳೂರು ದಿನಾಂಕ ಜೂನ್-2007 ರಲ್ಲಿ ಆಡಳಿತಾತ್ಮಕ ಅನುಮೋದನೆಯಾದ ರೂ.844.00 ಲಕ್ಷಗಳ ಯೋಜನೆಯಡಿ ಒಳಚರಂಡಿ ಕಾಮಗಾರಿಗಳನ್ನು ನವಂಬರ್ 2013 ರಲ್ಲಿ ಪೂರ್ಣಗೊಳಿಸಿ, ಚಾಲನೆಗೊಳಿಸಲಾಗಿದೆ. |
| | | 0.25 ದಶಲಕ್ಷ ಲೀಟರ್-2 ಸಂಖ್ಯೆ | ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ/39/ ಯುಡಿಎಸ್/2015, ಬೆಂಗಳೂರು ದಿನಾಂಕ 06-01-2018 ರಲ್ಲಿ ಆಡಳಿತಾತ್ಮಕ ಅನುಮೋದನೆಯಾದ ರೂ.647.27 ಲಕ್ಷಗಳ ಯೋಜನೆಯಡಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಜೈನಾಪುರದ 0.25 ದಶ ಲಕ್ಷ ಲೀಟರ್ ಸಾಮರ್ಥ್ಯದ ಎಂ.ಬಿ.ಬಿ.ಆರ್. ಮಾದರಿಯ ಎಸ್.ಟಿ.ಪಿ. ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದು, ಸವಳಹಳ್ಳ ಪ್ರದೇಶದಲ್ಲಿಯ 0.25 ದಶ ಲಕ್ಷ ಲೀಟರ್ ಸಾಮರ್ಥ್ಯದ ಎಂ.ಬಿ.ಬಿ.ಆರ್ ಮಾದರಿಯ ಎಸ್.ಟಿ.ಪಿ. ಕಾಮಗಾರಿಯು ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು. |
| 2 | ತಾಳಿಕೋಟೆ (ಪುರಸಭೆ) | 4.24 ದಶಲಕ್ಷ ಲೀಟರ್ | ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ/ 13/ ಸಿಎಸ್ಎಸ್/ 2006 ದಿನಾಂಕ: 16-06-2006 ರಲ್ಲಿ ಆಡಳಿತಾತ್ಮಕ ಅನುಮೋದನೆಯಾದ ರೂ. 2027.00 ಲಕ್ಷಗಳ ಯೋಜನೆಯಡಿ ಒಳಚರಂಡಿ ಕಾಮಗಾರಿಗಳನ್ನು ಮಾರ್ಚ-2016 ರಲ್ಲಿ ಪೂರ್ಣಗೊಳಿಸಿ, ಚಾಲನೆಗೊಳಿಸಲಾಗಿದೆ. |
| 3 | ಇಂಡಿ (ಪುರಸಭೆ) | 4.2 ದಶಲಕ್ಷ ಲೀಟರ್ | ಸರ್ಕಾರದ ಆದೇಶ ಸಂಖ್ಯೆ: ನಅಇ 04 ಯುಡಿಎಸ್ 2009 ಬೆಂಗಳೂರ ದಿನಾಂಕ: 28.02.2009 ರಲ್ಲಿ ಆಡಳಿತಾತ್ಮಕ ಅನುಮೋದನೆಯಾದ ರೂ.1420.00 ಲಕ್ಷಗಳ ಯೋಜನೆಯಡಿ ಒಳಚರಂಡಿ ಕಾಮಗಾರಿಗಳನ್ನು ಮಾರ್ಚ 2016 ರಲ್ಲಿ ಪೂರ್ಣಗೊಳಿಸಿ, ಚಾಲನೆಗೊಳಿಸಲಾಗಿದೆ. |
| 4 | ಸಿಂದಗಿ (ಪುರಸಭೆ) | 7.37 ದಶಲಕ್ಷ ಲೀಟರ್ | ಸರ್ಕಾರದ ಆದೇಶ ಸಂಖ್ಯೆ: ನಅಇ 13 ಯುಡಿಎಸ್ 2018 ಬೆಂಗಳೂರ ದಿನಾಂಕ: 23.02.2019 ರಲ್ಲಿ ಆಡಳಿತಾತ್ಮಕ ಅನುಮೋದನೆಯಾದ ರೂ.9075.00 ಲಕ್ಷಗಳ ಯೋಜನೆಯಡಿ ಒಳಚರಂಡಿ ಕೊಳವೆ ಮಾರ್ಗ, ಏರು ಕೊಳವೆ ಮಾರ್ಗ, ವೆಟ್‌ವೆಲ್ ಮತ್ತು 7.37 ದಶ ಲಕ್ಷ ಲೀಟರ್ ಸಾಮರ್ಥ್ಯದ ಡಬ್ಲ್ಯೂ.ಎಸ್.ಪಿ ಮಾದರಿಯ ಎಸ್.ಟಿ.ಪಿ ಹಾಗೂ ಸೀವೇಜ್ ನಾನ್ ಕ್ಲಾಗ್ ಪಂಪಿಂಗ್ ಮಶೀನರಿಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಅದರಂತೆ, ಯೋಜನೆಯನ್ನು ದಿನಾಂಕ: 03.12.2019 ರಂದು ಪ್ರಾರಂಭಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 5 | ಮುದ್ದೇಬಿಹಾಳ (ಪುರಸಭೆ) | 5.24 ದಶಲಕ್ಷ ಲೀಟರ್ | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರ ಆದೇಶ ಸಂಖ್ಯೆ 839, ದಿನಾಂಕ 15-05-2018 ರಲ್ಲಿ ಅನುಮೋದಿಸಲಾದ ರೂ.629.00 ಲಕ್ಷಗಳ ಕಾಮಗಾರಿಯಡಿಯಲ್ಲಿ, 5.24 ದಶ ಲಕ್ಷ ಲೀಟರ್ ಸಾಮರ್ಥ್ಯದ ಎಸ್.ಬಿ.ಟಿ. ಮಾದರಿಯ ಎಸ್.ಟಿ.ಪಿ. ಕಾಮಗಾರಿಯನ್ನು ಕೈಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 6 | ಆಲಮೇಲ (ಪಟ್ಟಣ ಪಂಚಾಯತ್) | - | ಎಸ್.ಟಿ.ಪಿ. ಅಳವಡಿಸುವ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ. |
| 7 | ಮನಗೂಳಿ (ಪಟ್ಟಣ ಪಂಚಾಯತ್) | - | |
| 8 | ಕೊಲ್ಹಾರ (ಪಟ್ಟಣ ಪಂಚಾಯತ್) | - | |
| 9 | ನಾಲತವಾಡ (ಪಟ್ಟಣ ಪಂಚಾಯತ್) | | |
| 10 | ನಿಡಗುಂದಿ (ಪಟ್ಟಣ ಪಂಚಾಯತ್) | | |
| 11 | ದೇವರಹಿಪ್ಪರಗಿ (ಪಟ್ಟಣ ಪಂಚಾಯತ್) | | |
| 12 | ಚಡಚಣ (ಪಟ್ಟಣ ಪಂಚಾಯತ್) | | |
| 13 | ತಿಕೋಟ (ಪಟ್ಟಣ ಪಂಚಾಯತ್) | | |

19/2/22

ವ್ಯವಸ್ಥಾಪಕ ನಿರ್ದೇಶಕರು,
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು.